**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC**-726/2025 **PW**: 1

**ದಿಃ 11.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರ ಪರ ಶ್ರೀ ಬಿ ಸಿ ವಕೀಲರಿಂದಃ**

ನಾನು ಈ ಅರ್ಜಿಯಲ್ಲಿ ಅರ್ಜಿದಾರನಾಗಿದ್ದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ನಾನು ನನ್ನ ಅರ್ಜಿಗೆ ಸಂಬಂದಿಸಿದಂತೆ ಸಿಸಿ ನಂಃ1428/2025 ರ ಆಜ್ಞಾ ಪುಟದ ದೃಡೀಕೃತ ನಕಲನ್ನು ನಿಪಿ 1 ಎಂದು, ಎಫ್ ಐ ಆರ್ ದೃಡೀಕೃತ ನಕಲನ್ನು ನಿಪಿ 2 ಎಂದು, ದೂರಿನ ದೃಡೀಕೃತ ನಕಲನ್ನು ನಿಪಿ 3 ಎಂದು, ಅಂತಿಮ ವರದಿಯ ದೃಡೀಕೃತ ನಕಲನ್ನು ನಿಪಿ 4 ಎಂದು, ದೂರುದಾರರ ಮರುಹೇಳಿಕೆಯ ದೃಡೀಕೃತ ನಕಲನ್ನು ನಿಪಿ 5 ಎಂದು, ಅಪರಾದ ವಿವರ ನಮೂನೆ ದೃಡೀಕೃತ ನಕಲನ್ನು ನಿಪಿ 6 ಎಂದು, ಐ ಎಂ ವಿ ವರದಿಯ ದೃಡೀಕೃತ ನಕಲನ್ನು ನಿಪಿ 7 ಎಂದು, ಸರ್ಟಿಪಿಕೇಟ ದೃಡೀಕೃತ ನಕಲನ್ನು ನಿಪಿ 8 ಎಂದು, ಗಾಯದ ಪ್ರಮಾಣ ಪತ್ರದ ದೃಡೀಕೃತ ನಕಲನ್ನು ನಿಪಿ 9 ಎಂದು, ಪಾಲಿಸಿ ದೃಡೀಕೃತ ನಕಲನ್ನು ನಿಪಿ 10 ಎಂದು, ಎಂ ಎಲ್ ಸಿ ಇಂಟಿಮೇಶನ ದೃಡೀಕೃತ ನಕಲನ್ನು ನಿಪಿ 11 ಎಂದು, 19 ಪ್ರಿಸ್ಕಪ್ಸನ್ಸ ಒಟ್ಟಾಗಿ ದೃಡೀಕೃತ ನಕಲನ್ನು ನಿಪಿ 12 ಎಂದು, ಒ ಪಿ ಡಿ ರಶೀದಿಯನ್ನು ನಿಪಿ 13 ಎಂದು, ಅಡ್ವಾನ್ಸ ರಶೀದಿಯನ್ನು ನಿಪಿ 14 ಎಂದು, ಐದು ಮೆಡಿಕಲ್ಲ ಬಿಲ್ಲುಗಳನ್ನು ಒಟ್ಟಾಗಿ ನಿಪಿ 15 ಎಂದು, ಡಿಸ್ಚಾರ್ಜ ಸಮರಿಯನ್ನು ನಿಪಿ 16 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಈ ಹಂತದಲ್ಲಿ ಎದುರುದಾರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಾಗಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲಾ -

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.